**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್ ವ್ಹಿ ಸಂಕನೂರ ರವರು ಮಂಡಿಸಿರುವ ನಿಯಮ 330 ರ ಸೂಚನೆಗೆ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಹೇಳಿಕೆ:**

* * *

**ವಿಷಯ:-** ರಾಜ್ಯದ ವಿವಿಧ ಅನುದಾನಿತ ಪದವಿ ಕಾಲೇಜುಗಳಿಂದ ಬೇರ್ಪಟ್ಟ ಪಿಯು ಕಾಲೇಜುಗಳಿಗೆ ಬೋಧನೆಗೆ ಮಂಜೂರು ಮಾಡಿದ ಎಲ್ಲಾ ವಿಷಯಗಳ ಹುದ್ದೆಗಳನ್ನು ಅನುದಾನಕ್ಕೆ ಒಳಪಡಿಸದೆ ಇದ್ದ ಕಾರಣಕ್ಕೆ ಕಾಲೇಜುಗಳನ್ನು ನಡೆಸುವುದು ತೊಂದರೆ ಆಗಿದ್ದನ್ನು ಮತ್ತು ಅಲ್ಲಿ ಉಪನ್ಯಾಸಕರಿಗೆ ಆರ್ಥಿಕವಾಗಿ ತೊಂದರೆಗೆ ಒಳಗಾಗಿರುವ ಬಗ್ಗೆ ಪ್ರಸ್ತಾಪಿಸ ಬಯಸುತ್ತೇನೆ.

**<u>ಉತ್ತರ:</u>**

- ರಾಜ್ಯದಲ್ಲಿ ಪ್ರಸ್ತುತ ಕಾಲೇಜು ಶಿಕ್ಷಣ ಇಲಾಖೆಯಿಂದ ಬೇರ್ಪಟ್ಟ 164 ಪದವಿ ಪೂರ್ವ ಕಾಲೇಜುಗಳ ಪೈಕಿ 156 ಪದವಿ ಪೂರ್ವ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ.
- ಪದವಿಯಿಂದ ಬೇರ್ಪಟ್ಟ ಪದವಿ ಪೂರ್ವ ಕಾಲೇಜುಗಳಲ್ಲಿ ಹುದ್ದೆಗಳನ್ನು ಮಂಜೂರು ಮಾಡುವ ಕ್ರಮವಿರುವುದಿಲ್ಲ. ಅದರ ಬದಲಾಗಿ, ಅನುದಾನಿತ ಪದವಿ ಕಾಲೇಜಿನಿಂದ ಹುದ್ದೆಗಳನ್ನು ಅನುದಾನಿತ ಪದವಿ ಪೂರ್ವ ಕಾಲೇಜಿಗೆ ಹಸ್ತಾಂತರಿಸಲಾಗಿರುತ್ತದೆ.
- ಹುದ್ದೆಗಳನ್ನು ಹಸ್ತಾಂತರಿಸುವ ಸಂಬಂಧ ಸರ್ಕಾರದ ಆದೇಶ ಸಂಖ್ಯೆ: ಇಡಿ 539 ಡಿಪಿಐ 2007 ದಿನಾಂಕ:15-12-2007ರನ್ವಯ ತ್ರಿಸದಸ್ಯ ಸಮಿತಿಯ ಅನುಮೋದನೆ ನಂತರದಲ್ಲಿ ಹುದ್ದೆಗಳನ್ನು ಪದವಿಯಿಂದ ಪದವಿ ಪೂರ್ವ ಕಾಲೇಜಿಗೆ ಹಸ್ತಾಂತರಿಸಲಾಗಿರುತ್ತದೆ.
- ಈ ರೀತಿ ತ್ರಿಸದಸ್ಯ ಸಮಿತಿಯ ಅನುಮೋದನೆ ನಂತರದಲ್ಲಿ ಸಂಬಂಧಿಸಿದ ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿಯಮಗಳ ಪ್ರಕಾರ ಹುದ್ದೆ ಅರ್ಹತೆ ಹೊಂದಿರುವ ಬಗ್ಗೆ ಖಚಿತಪಡಿಸಿಕೊಂಡು ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆದು, ಪ್ರಚಲಿತ ನಿಯಮಗಳ ಪ್ರಕಾರ ಹುದ್ದೆ ಭರ್ತಿಗೆ ಅವಕಾಶ ಕಲ್ಪಿಸಲಾಗುವುದು.
- ರಾಜ್ಯದಲ್ಲಿ ಸಂಯುಕ್ತ ಪದವಿ ಕಾಲೇಜುಗಳಿಂದ ಬೇರ್ಪಟ್ಟ ಪ್ರತಿಯೊಂದು ಪದವಿ ಪೂರ್ವ ಕಾಲೇಜುಗಳಲ್ಲಿ ಹಸ್ತಾಂತರಗೊಂಡ ಹುದ್ದೆಗಳ ಸಂಖ್ಯೆ & ಖಾಲಿ ಹುದ್ದೆಗಳ ವಿವರಗಳು ಈ ಕೆಳಕಂಡಂತಿರುತ್ತದೆ.

| | |
|---|---|
| ಹಸ್ತಾಂತರಗೊಂಡ ಹುದ್ದೆಗಳ ಸಂಖ್ಯೆ (ಅಂದರೆ ಹಸ್ತಾಂತರಗೊಂಡು ಆಡಳಿತಾತ್ಮಕ ಅನುಮೋದನೆ ಪಡೆದಿರುವ ಹುದ್ದೆಗಳು) | 664 |
| ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳು | 334 |
| ಖಾಲಿ ಇರುವ ಅಥವಾ ಭರ್ತಿಯಾಗದ ಹುದ್ದೆಗಳ ಸಂಖ್ಯೆ | 277 |
| ಕಾಲೇಜಿನ ವೇತನಾನುದಾನ ಹಿಂಪಡೆದಿರುವುದರಿಂದ ರದ್ದಾಗಿರುವ ಒಟ್ಟು ಹುದ್ದೆಗಳು | 43 |
| ಮಾನ್ಯ ನ್ಯಾಯಾಲಯದ ಪ್ರಕರಣ ಬಾಕಿ ಹಿನ್ನೆಲೆಯಲ್ಲಿ ಭರ್ತಿ ಮಾಡಲು ಸಾಧ್ಯವಾಗದ ಹುದ್ದೆಗಳ ಸಂಖ್ಯೆ | 10 |

- ಮೇಲಿನ ಹುದ್ದೆಗಳಿಗೆ ಆಡಳಿತ ಮಂಡಳಿಗಳು ಹುದ್ದೆ ಭರ್ತಿಗೆ ಪ್ರಸ್ತಾವನೆ ಸಲ್ಲಿಸಿದ್ದಲ್ಲಿ, ಸರ್ಕಾರ/ಇಲಾಖೆ ನಿಗಧಿಪಡಿಸಿರುವ ಮಾನದಂಡ, ನಿಯಮಗಳ ಪ್ರಕಾರ ಅರ್ಹತೆ ಹೊಂದಿದ್ದಲ್ಲಿ, ಹುದ್ದೆ ಭರ್ತಿಗೆ ಅನುಮತಿ ನೀಡಲಾಗುವುದು. ಅಲ್ಲಿಯವರೆಗೂ ಸದರಿ ಹುದ್ದೆಗಳಲ್ಲಿನ ಬೋಧನಾ ವಿಷಯಕ್ಕೆ ಉಪನ್ಯಾಸಕರನ್ನು ನೇಮಿಸಿಕೊಂಡು ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವುದು ಆಯಾ ಕಾಲೇಜಿನ ನೇಮಕಾತಿ ಮತ್ತು ಶಿಸ್ತು ಪ್ರಾಧಿಕಾರವಾದ ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ.

**(ಎಸ್. ಮಧು ಬಂಗಾರಪ್ಪ)**

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

ಸಂಖ್ಯೆ: ಇಪಿ 268 ಡಿಜಿಡಬ್ಲ್ಯೂ 2026